# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 432

ಸದಸ್ಯರ ಹೆಸರು : ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 10.12.2025

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನ ಹಳಿಯಾಳ ಘಟಕದಿಂದ ಅಳ್ನಾವರ ಮೂಲಕ ಖಾನಾಪೂರ ತಾಲ್ಲೂಕಿನ ಗೊಧೋಳಿ-ಗೋದಗೇರಿ ಗ್ರಾಮದವರೆಗೆ ಪ್ರತಿದಿನ ಬೆಳಿಗ್ಗೆ ಪ್ರಯಾಣಿಸುವ ಬಸ್ ಅನ್ನು ಶಾಲಾ ಕಾಲೇಜು ಮಕ್ಕಳ ಅನುಕೂಲ ದೃಷ್ಟಿಯಿಂದ ಗೊಧೋಳಿ ಗ್ರಾಮದಿಂದ ಕೇವಲ 5 ಕಿ.ಮೀ. ದೂರದಲ್ಲಿರುವ ಬಾಳಗುಂದ ಗ್ರಾಮದವರೆಗೆ ಸಂಚಾರ ವಿಸ್ತರಿಸಲು ಕ್ರಮವಹಿಸುವುದೇ;</td><td rowspan="2">ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯ ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನ ಹಳಿಯಾಳ ಘಟಕದ ಅನುಸೂಚಿ ಸಂಖ್ಯೆ: 71 ಬಿಎರಲ್ಲಿ ಪ್ರತಿದಿನ ಬೆಳಿಗ್ಗೆ 8.30, ಸಾಯಂಕಾಲ 17.00 ಗಂಟೆಗೆ ಹಾಗೂ ಪ್ರತಿ ಶನಿವಾರ ಮಧ್ಯಾಹ್ನ 13.00 ಗಂಟೆಗೆ ಅಳ್ನಾವರದಿಂದ ಬಾಳಗುಂದ ಗ್ರಾಮಕ್ಕೆ ಸರತಿಗಳನ್ನು ವಿಸ್ತರಿಸಿ ಕಾರ್ಯಾಚರಿಸಲಾಗುತ್ತಿದೆ. ಸದರಿ ಬಸ್ ಕಾರ್ಯಾಚರಣೆಯ ಸದುಪಯೋಗವನ್ನು ಶಾಲಾ ಕಾಲೇಜು ಮಕ್ಕಳು ಮತ್ತು ನಾಗರೀಕರು ಪಡೆದುಕೊಳ್ಳುತ್ತಿದ್ದು, ಇದು ಅವರ ಅವಶ್ಯಕತೆಗನುಗುಣವಾಗಿದೆ.</td></tr>
<tr><td>ಆ.</td><td>ಸದರಿ ಬಸ್ಸು ಮಾರ್ಗವನ್ನು ಬಾಳಗುಂದ ಗ್ರಾಮದವರೆಗೆ ವಿಸ್ತರಿಸಿದರೆ ಅನೇಕ ಶಾಲಾ ಕಾಲೇಜು ಮಕ್ಕಳಿಗೆ ಮತ್ತು ನಾಗರೀಕರಿಗೆ ಅನುಕೂಲವಾಗಲಿದೆ; ಈ ಕುರಿತು ಸರ್ಕಾರದ ಮುಂದಿನ ಕ್ರಮಗಳೇನು? (ವಿವರ ನೀಡುವುದು)</td></tr>
</table>

ಸಂಖ್ಯೆ: ಟಿಡಿ 207 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು